**ದಿನಾಂಕಃ 05/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಜೆ.ಎಸ್.ಎನ್ ವಕೀಲರಿಂದಃ**

1. ದಿಃ 04/11/2016 ರ ಒಂದು ವಾರದ ಹಿಂದೆ ಆರೋಪಿತ ನನ್ನನ್ನು ಹಣ ಕೇಳಿದ್ದರು. ನಾನು ದಿಃ04/11/2016 ರಂದು ಸಾಲವನ್ನು ಕೊಟ್ಟೆ ನಾನು ದಿಃ06/11/2016 ರಂದು ಹಣವನ್ನು ಕೊಟ್ಟೆ ಎಂದು ಪಿರ್ಯಾದಿಯಲ್ಲಿ ಬರೆಸಿಲ್ಲ. ಚೆಕ್ ನಲ್ಲಿ ಬರೆದಿರುವ ದಿನಾಂಕ ನನಗೆ ಗೊತ್ತಿಲ್ಲ. ನಾನು ಬಡ್ಡಿಗೆ ಹಣವನ್ನು ಕೊಟ್ಟಿಲ್ಲ. 2009 ರಿಂದ ನಾನು ಆರೋಪಿತನಿಗೆ ಹಣವನ್ನು ಕೊಡುವುದು, ಹಿಂಪಡೆಯುವುದು ಮಾಡುತ್ತಿದ್ದೆ. ಸಾಕ್ಷಿಗೆ ದಾಖಲೆಗಳನ್ನು ತೋರಿಸಿ ಅದರಲ್ಲಿರುವ ಸಹಿ ಮತ್ತು ಬರವಣಿಗೆ ಯಾರದ್ದು ಎಂದರೆ ನನ್ನದಲ್ಲ ಎಂದು ನುಡಿಯುತ್ತಾರೆ.

2. ವಕಾಲತ್ತಿನಲ್ಲಿ ನನ್ನದೇ ಸಹಿ ಇದೆ. ವಕಾಲತ್ತಿನಲ್ಲಿರುವ ಸಹಿಯಲ್ಲಿ ಹೆಚ್.ಸಿ ಮತ್ತು ಒಂದು ಚಿಕ್ಕ ಚೀಟಿಯಲ್ಲಿರುವ ಹೆಚ್.ಸಿ ಎಂಬ ಅಕ್ಷರಗಳು ಒಂದೇ ಎಂದರೆ ಸಾಕ್ಷಿಯು ಇರಬಹುದು ಆದರೆ ನನ್ನದಲ್ಲ ಎಂದು ನುಡಿಯುತ್ತಾರೆ. ಚಿಕ್ಕ ಚೀಟಿಯಲ್ಲಿರುವ ಬರವಣಿಗೆ ನನ್ನದಲ್ಲ, ಅದನ್ನು ತಜ್ಞರಿಗೆ ಕಳುಹಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಿಃ25/01/2011 ರಲ್ಲಿ ಮಾದೇವಣ್ಣನಿಗೆ 3,00,000-00 ರೂಪಾಯಿಗಳು 4%ರಂತೆ ಬಡ್ಡಿ ತಿಂಗಳಿಗೆ 1200-00 ಲೆಕ್ಕ ಹಾಕುವುದು ಎಂದು ಬರೆದಿದೆ ಎಂದರೆ, ಅದು 2011 ರಂದು ಇರಬಹುದು ಆದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಣ್ಣ ಮೊತ್ತವನ್ನು 2 ಬಾರಿ ಪಡೆದು ಆರೋಪಿತ ಹಿಂದಿರುಗಿಸಿದ್ದರು. ಆದರೆ ಈ ಪ್ರಕರಣದ ದೊಡ್ಡ ಮೊತ್ತವನ್ನು ಪಡೆದು ಇದೇ ಎರಡನೇ ಬಾರಿ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದು ನುಡಿಯುತ್ತಾರೆ. ದಿಃ20/09/2011 ರಲ್ಲಿ ಮಾದೇವಣ್ಣನಿಗೆ 1,50,000-00 ರೂಪಾಯಿಗಳು 5% ರಂತೆ ನೀಡಿ ಬರೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಒಂದು ಸಣ್ಣ ಮೊತ್ತ ಎಂದರೆ 25 ಸಾವಿರ, ಇನ್ನೊಂದು ಬಾರಿ 40-50 ಸಾವಿರ ಆರೋಪಿತ ಪಡೆದಿರಬಹುದು ಎಂದು ನುಡಿಯುತ್ತಾರೆ. ಆ ಮೊತ್ತಕ್ಕೆ ಬಡ್ಡಿಯನ್ನು ಹಾಕಿಲ್ಲ. 30,000/-, 4,10,000/-, 1,80,000/- ಒಟ್ಟು 6,20,000/- + 30,000/- = 6,50,000/- ಎಂದು

ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ಈಗ ಹೇಳಿದ ಮೊತ್ತವನ್ನು ಆರೋಪಿತ ನನಗೆ ಸಂದಾಯ ಮಾಡಿದ ಹಣವನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

3. 2009 ರಲ್ಲಿ ಆರೋಪಿತನಿಗೆ ಎಷ್ಟು ಹಣ ಕೊಟ್ಟಿದ್ದೆ ಎಂದು ನಾನು ಮರೆತಿದ್ದೇನೆ. 2009 ರಿಂದ 2017 ರವರೆಗೆ ಆರೋಪಿತನಿಗೆ ನೀಡಿರುವ ಹಣದ ಬಗ್ಗೆ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ. 2009 ರಿಂದ 2017 ರವರೆಗೆ ಆರೋಪಿತ ನೊಂದಿಗೆ ವ್ಯವಹರಿಸಿದ ಬಗ್ಗೆ ನೆನಪಿದೆ. ರೂ.1000 ಮುಖ ಬೆಲೆಯ 300 ನೋಟುಗಳನ್ನು ಮತ್ತು ರೂ.500 ಮುಖ ಬೆಲೆಯ 200 ನೋಟುಗಳನ್ನು ನೀಡಿದ್ದೆ. ನೋಟು ಅಮಾನ್ಯೀಕರಣ ಆಗುವುದಕ್ಕಿಂತ ಮುಂಚಿನ ನೋಟುಗಳನ್ನು ನೀಡಿರುತ್ತೇನೆ. ಆರೋಪಿತನಿಗೆ ಕೊಟ್ಟ ಹಣ ಮನೆಯಲ್ಲೇ ಇತ್ತು, ಅದನ್ನೇ ಆರೋಪಿತನಿಗೆ ಕೊಟ್ಟಿದ್ದೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಚಿಕ್ಕಚಿಕ್ಕ ವ್ಯವಹಾರವನ್ನು ಮಾಡುತ್ತೇನೆ, ಅದರಿಂದ ಬಂದ ಹಣವನ್ನು ಆರೋಪಿತನಿಗೆ ನೀಡಿದ್ದೆ. ತಂಬಾಕು ವ್ಯವಹಾರವನ್ನು ಮಾಡುತ್ತಿದ್ದೆ. ಯಾವುದೇ ವ್ಯಾಪಾರ ಮಾಡಬೇಕಾದರೆ ಸಂಬಂಧಪಟ್ಟ ಇಲಾಖೆಯವರಿಂದ ಪರವಾನಿಗೆ ಪಡೆಯಬೇಕು ಎಂದರೆ ಸರಿಯಲ್ಲ. ತಂಬಾಕು ಮಾರಾಟ ಮಾಡಲು ಮತ್ತು ಖರೀದಿಸಲು ಲೈಸೆನ್ಸ್ ಬೇಕು ಎಂದರೆ ನಾನು ಅಲ್ಲಲ್ಲೇ ವ್ಯವಹಾರ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಕೇಂದ್ರ ಸರ್ಕಾರದವರು ಸುಮಾರು 10-12 ತಂಬಾಕು ಮಂಡಳಿಗಳನ್ನು ತಂಬಾಕು ಖರೀದಿಗಾಗಿ ನಿರ್ಮಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತಂಬಾಕು ಮಾರುಕಟ್ಟೆಗಳಲ್ಲಿ ಹರಾಜು ಪ್ರಕ್ರಿಯೆ ಮೂಲಕ ನೊಂದಾಯಿತ ತಂಬಾಕು ಬೆಳೆಗಾರರು ಮಾತ್ರ ಮಾರಾಟ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರೈತರಿಂದ ತಂಬಾಕು ಖರೀದಿಸಿ, 2 ರೂಪಾಯಿ ಲಾಭ ಬಂದರೂ ಮಾರಾಟ ಮಾಡುತ್ತಿದ್ದೆ. ತಂಬಾಕು ಮಂಡಳಿಯಲ್ಲಿ ಮಾರಾಟ ಮಾಡದೇ ಹೊರಗಡೆ ಮಾರಾಟ ಮಾಡುವುದು ಅಪರಾಧ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಣ್ಣಪುಟ್ಟ ವ್ಯವಹಾರಕ್ಕೆ ನಾನು ಆದಾಯ ತೆರಿಗೆ ಪಾವತಿಸುತ್ತಿರಲಿಲ್ಲ. ನನಗೆ ನಮ್ಮ ಖರ್ಚಿಗೆ ಆಗುವಷ್ಟು ವಾರ್ಷಿಕ ರೂ.25,000/- ಆದಾಯ ಬರುತ್ತಿತ್ತು.

4. ನಿಪಿ.1 ರ ಮೇಲಿರುವ ಬರವಣಿಗೆ ಯಾರು ಬರೆದರು ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ಮುಂದೆ ಸಹಿ ಮಾಡಿದರು. ನಾನು ನನ್ನ ಮನೆಯಲ್ಲಿ ಹಣ ಕೊಟ್ಟಾಗ ನಾನು ಮತ್ತು ಆರೋಪಿತ ಇಬ್ಬರೇ ಇದ್ದೆವು. ಆರೋಪಿತನ ತಂದೆಯ ಹೆಸರು ಸಣ್ಣತಮ್ಮೇಗೌಡ. ನನ್ನ ಪಿರ್ಯಾದಿಯಲ್ಲಿ ಯಾವ ಕಾರಣಕ್ಕೆ ಆರೋಪಿತ ಹಣವನ್ನು ಪಡೆದರು ಎಂದು ಬರೆಸಿಲ್ಲ. ನನ್ನ

ಪಿರ್ಯಾದಿಯಲ್ಲಿ ಬರೆದಿರುವ ವಿಚಾರ ಗೊತ್ತು. ನನಗೆ ಕಂಪಲಾಪುರ ಶಾಖೆಯ Cauvery Bank ನ ಚೆಕ್ ನೀಡಿದ್ದರು. Cauvery Bank ಯಾವ ವರ್ಷದವರೆಗೆ ಅದೇ ನಾಮಧೇಯದಲ್ಲಿ ಮುಂದುವರೆದಿತ್ತು ಎಂದು ನನಗೆ ಗೊತ್ತಿಲ್ಲ. 2011 ರಲ್ಲಿ Cauvery Bank ಎಂಬ ನಾಮಧೇಯ ಅಂತ್ಯಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಆನಂತರ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ ಎಂದು ಆಯಿತು ಎಂದರೆ ಸರಿ. ನಂತರ ಸದರಿ ಬ್ಯಾಂಕ್ Kaveri Grameena Bank ಆಯಿತು ಎಂದರೆ ಇರಬಹುದು. ಬ್ಯಾಂಕ್‌ಗಳನ್ನು ಒಟ್ಟುಗೂಡಿಸಿದ ನಂತರ ಅದು Karnataka Grameena Bank ಎಂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾಮಧೇಯಗಳು ಬದಲಾದ ನಂತರ ಹಿಂದಿನ ಚೆಕ್ ಗಳನ್ನು ರದ್ದುಪಡಿಸಿದರು ಎಂದರೆ ನನಗೆ ಗೊತ್ತು, ಆದರೆ ಕಾಲಾವಕಾಶ ನೀಡಿತ್ತು ಎಂದು ನುಡಿಯುತ್ತಾರೆ. ಸಾಕ್ಷಿಯ ಮುಂದುವರೆದು ಹಿಂದಿರುಗಿಸಲು ಕಾಲಾವಕಾಶ ನೀಡಿತ್ತು ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀಸವಾಲನ್ನು ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**